DBCDC ದೇಹಿವಅನಿ

# ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು.

(ಕರ್ನಾಟಕ ಸರ್ಕಾರದ ಒಂದು ಅಂಗ ಸಂಸ್ಥೆ)

ದಿನಾಂಕ 27-12-2019 ರಂದು ಮಧ್ಯಾಹ್ನ 2.30 ಗಂಟೆಗೆ ನಂ. 16-ಡಿ, 4ನೇ ಮಹಡಿ, ದೇವರಾಜ ಅರಸು ಭವನ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು-560052 ಇಲ್ಲಿ ಜರುಗಿದ ನಿಗಮದ 183ನೇ ನಿರ್ದೇಶಕ ಮಂಡಳಿ ಸಭೆಯ ನಡವಳಿಗಳು.

ಹಾಜರಿದ್ದವರು:-

1. ಶ್ರೀ ಮೊಹಮದ್ ಮೊಹಸಿನ್ ಐ.ಎ.ಎಸ್., ಸರ್ಕಾರದ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಹಾಗೂ ಅಧ್ಯಕ್ಷರು, ಡಿ.ಬಿ.ಸಿ.ಡಿ.ಸಿ, ಬೆಂಗಳೂರು — ನಿರ್ದೇಶಕರು

2. ಶ್ರೀ ಪಿ.ವಸಂತಕುಮಾರ್ ಐ.ಎ.ಎಸ್., ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು — ನಿರ್ದೇಶಕರು

3. ಶ್ರೀ ಡಿ.ಎಸ್.ಸುದರ್ಶನ್ ಕುಮಾರ್, ಸರ್ಕಾರದ ಉಪಕಾರ್ಯದರ್ಶಿಗಳು (ಕಲ್ಯಾಣ), ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು — ನಿರ್ದೇಶಕರು

4. ಶ್ರೀ.ಜಿ.ಜಗದೀಶ್ ವ್ಯವಸ್ಥಾಪಕ ನಿರ್ದೇಶಕರು, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಬೆಂಗಳೂರು — ನಿರ್ದೇಶಕರು

ಗೈರು ಹಾಜರಾದವರು:-

1. ಶ್ರೀಮತಿ ಸಿ.ಹೇಮಲತ, ನಿರ್ದೇಶಕರು
ಸರ್ಕಾರದ ಉಪ ಕಾರ್ಯದರ್ಶಿಗಳು,
ಸಾರ್ವಜನಿಕ ಉದ್ದಿಮೆಗಳ ಇಲಾಖೆ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು.

2. ಶ್ರೀ.ಕೆ.ನಾರಾಯಣ್, ನಿರ್ದೇಶಕರು
ವ್ಯವಸ್ಥಾಪಕ ನಿರ್ದೇಶಕರು,
ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು
ಮತ್ತು ಅಭಿವೃದ್ಧಿ ನಿಗಮ,
ನವದೆಹಲಿ

ವಿಷಯ ಸಂಖ್ಯೆ-1: ನಿರ್ದೇಶಕ ಮಂಡಳಿಯಲ್ಲಿಯ ಬದಲಾವಣೆಯನ್ನು ದಾಖಲು ಮಾಡುವುದು.

ನಿರ್ಣಯ: ಸರ್ಕಾರದ ಅಧಿಸೂಚನೆ ಸಂಖ್ಯೆ ಸಿಆಸುಇ 96 ಆಸೇವ 2019 ದಿನಾಂಕ 16-10-2019 ಮತ್ತು ಕರ್ನಾಟಕ ಉಚ್ಚ ನ್ಯಾಯಲಯದ ತೀರ್ಪಿನ ಸಂಖ್ಯೆ: 51614/2019 (ಎಸ್-ಕೆ.ಎಸ್.ಎ.ಟಿ) ಬೆಂಗಳೂರು ದಿನಾಂಕ: 03-12-2019ರನ್ವಯ ಶ್ರೀ.ಜಿ.ಜಗದೀಶ್, ಜಂಟಿ ನಿರ್ದೇಶಕರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇವರು ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರಾಗಿ ದಿನಾಂಕ 04-12-2019 ರಂದು ಡಾ||ಕೆ.ಎನ್.ವಿಜಯ್ ಪ್ರಕಾಶ್ ಇವರ ಸ್ಥಾನದಲ್ಲಿ ಅಧಿಕಾರ ವಹಿಸಿಕೊಂಡಿರುತ್ತಾರೆ. ಈ ಬದಲಾವಣೆಗಳನ್ನು ದಾಖಲು ಮಾಡಲು ತೀರ್ಮಾನಿಸಲಾಯಿತು.

ವಿಷಯ ಸಂಖ್ಯೆ-2: 182ನೇ ನಿರ್ದೇಶಕ ಮಂಡಳಿ ಸಭೆಯ ನಡವಳಿಯನ್ನು ದಾಖಲು ಮಾಡುವುದು.

ನಿರ್ಣಯ: ದಿನಾಂಕ 24-09-2019 ರಂದು ನಡೆದ 182ನೇ ನಿರ್ದೇಶಕ ಮಂಡಳಿ ಸಭೆಯ ನಡವಳಿಯನ್ನು ದಾಖಲು ಮಾಡಲು ತೀರ್ಮಾನಿಸಲಾಯಿತು.

ವಿಷಯ ಸಂಖ್ಯೆ-3: 182ನೇ ನಿರ್ದೇಶಕ ಮಂಡಳಿ ಸಭೆಯ ನಡವಳಿಯ ಮೇಲೆ ಕೈಗೊಂಡ ಕ್ರಮಗಳ ಸಮೀಕ್ಷೆ.

ನಿರ್ಣಯ: ದಿನಾಂಕ 24-09-2019 ರಂದು ನಡೆದ ನಡೆದ 182ನೇ ನಿರ್ದೇಶಕ ಮಂಡಳಿ ಸಭೆಯ ನಡವಳಿಗಳ ಮೇಲೆ ಕೈಗೊಂಡ ಕ್ರಮಗಳನ್ನು ದಾಖಲು ಮಾಡಲು ತೀರ್ಮಾನಿಸಲಾಯಿತು. ವಿಷಯ ಸಂಖ್ಯೆ 13ಕ್ಕೆ ಸಂಬಂಧಿಸಿದಂತೆ, ಆಪೆಕ್ಸ್ ಬ್ಯಾಂಕ್/ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್‌ಗಳಲ್ಲಿ ಅಳವಡಿಸಿಕೊಂಡಿರುವ ಸಾಲ ಮಂಜೂರಾತಿ ಸಾಫ್ಟ್‌ವೇರ್‌ನ್ನು ಪರಿಶೀಲಿಸಿ, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಅವಶ್ಯಕತೆಗನುಗುಣವಾಗಿ ಮಾರ್ಪಾಡು ಮಾಡಿಕೊಂಡು ಈ ನಿಗಮದಲ್ಲಿ ಸಾಲ ಮಂಜೂರಾತಿ ಸಾಫ್ಟ್‌ವೇರ್‌ನ್ನು ನಿಗಮದಲ್ಲಿ ಅಳವಡಿಸಲು ಅಗತ್ಯಕ್ರಮ ಕೈಗೊಳ್ಳಲು ತೀರ್ಮಾನಿಸಲಾಯಿತು.

ವಿಷಯ ಸಂಖ್ಯೆ-4: ದಿನಾಂಕ 01-4-2019 ರಿಂದ 30-11-2019ರ ವರೆಗಿನ ಪ್ರಗತಿ ಪರಿಶೀಲನೆ.

ನಿರ್ಣಯ: 2019-20ರ ಸಾಲಿಗೆ ಸರ್ಕಾರವು ಆಯವ್ಯಯದಲ್ಲಿ ಒದಗಿಸಿದ ರೂ.25000.00 ಲಕ್ಷ ಹಾಗೂ ನಿಗಮದಲ್ಲಿ ಉಳಿದಿರುವ ಅನುದಾನ/ಸಾಲ ಮರುಪಾವತಿ ಮೊತ್ತ ರೂ.3200.00 ಲಕ್ಷ ಹೀಗೆ ಒಟ್ಟು ರೂ.28200.00 ಲಕ್ಷಗಳಲ್ಲಿ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ

ನಿಗಮದಿಂದ ಒಟ್ಟು 37276 ಹಿಂದುಳಿದ ವರ್ಗಗಳ ಜನರಿಗೆ ಸಾಲ ಸೌಲಭ್ಯ ಒದಗಿಸುವ ಗುರಿ ಹೊಂದಿದೆ. 2019-20ನೇ ಸಾಲಿಗೆ ಆಯವ್ಯಯದಲ್ಲಿ ಒದಗಿಸಿದ ಮೊತ್ತದಲ್ಲಿ ರೂ.6000.00 ಲಕ್ಷ ಕಡಿತಗೊಳಿಸಿದೆ ಹಾಗೂ ಮೂರು ಕಂತುಗಳಲ್ಲಿ ರೂ.14000.00 ಲಕ್ಷಗಳು ಬಿಡುಗಡೆಯಾಗಿರುತ್ತದೆ. ದಿನಾಂಕ 01-04-2019 ರಿಂದ 30-11-2019 ವರೆಗೆ ನಿಗಮದಿಂದ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳಲ್ಲಿ 14523 ಫಲಾನುಭವಿಗಳಿಗೆ ರೂ.146.01 ಕೋಟಿಗಳನ್ನು ಮಂಜೂರು ಮಾಡಿ ಬಿಡುಗಡೆ ಮಾಡಿರುವುದನ್ನು ದಾಖಲಿಸಲಾಯಿತು.

2019-20ರ ಸಾಲಿನಲ್ಲಿ ಗುರಿಯನ್ವಯ ಪ್ರಗತಿ ಸಾಧಿಸದೇ ಇರುವ ವಿಧಾನಸಭಾ ಕ್ಷೇತ್ರಗಳ ಲಭ್ಯವಿರುವ ಮೊತ್ತವನ್ನು ಹೆಚ್ಚಿನ ಬೇಡಿಕೆ ಇರುವ ವಿಧಾನ ಸಭಾ ಕ್ಷೇತ್ರಗಳಿಗೆ ವರ್ಗಾಯಿಸಿಕೊಂಡು ಹಾಗೂ ಯಾವುದಾದರೊಂದು ಯೋಜನೆಯಲ್ಲಿ ಆರ್ಥಿಕ ಗುರಿ ಅನ್ವಯ ಪ್ರಗತಿ ಸಾಧನೆ ಆಗದೇ ಇದ್ದಲ್ಲಿ, ಉಳಿಕೆ ಆಗುವ ಮೊತ್ತವನ್ನು ಬೇಡಿಕೆ ಇರುವ ಯೋಜನೆಗಳಿಗೆ ಹೊಂದಾಣಿಕೆ ಮಾಡಿಕೊಂಡು, ಶೇ.100 ರಷ್ಟು ಪ್ರಗತಿ ಸಾಧಿಸಲು ವ್ಯವಸ್ಥಾಪಕ ನಿರ್ದೇಶಕರಿಗೆ ಅಧಿಕಾರ ನೀಡುವುದೆಂದು ತೀರ್ಮಾನಿಸಲಾಯಿತು.

<u>ವಿಷಯ ಸಂಖ್ಯೆ- 5:</u> 2019-20ನೇ ಸಾಲಿಗೆ ಗಂಗಾ ಕಲ್ಯಾಣ ಯೋಜನೆಯಡಿ ಹಂಚಿಕೆ ಮಾಡಿದ ಅನುದಾನದಲ್ಲಿ ಕಡಿತಗೊಳಿಸಿರುವ ಬಗ್ಗೆ.

<u>ನಿರ್ಣಯ</u>: 2019-20ನೇ ಸಾಲಿಗೆ ನಿಗಮದ ಗಂಗಾ ಕಲ್ಯಾಣ ಯೋಜನೆ ಅನುಷ್ಠಾನಕ್ಕಾಗಿ ರೂ.9500.00 ಲಕ್ಷಗಳ ಅನುದಾನವನ್ನು ಹಂಚಿಕೆ ಮಾಡಲಾಗಿರುತ್ತದೆ. ಈ ಮೊತ್ತಕ್ಕೆ ಅನುಗುಣವಾಗಿ 24 ಜಿಲ್ಲೆಗಳಲ್ಲಿ ಒಳಪಡುವ ವಿಧಾನಸಭಾ ಕ್ಷೇತ್ರಗಳಿಗೆ ಪ್ರತಿ ಕ್ಷೇತ್ರಕ್ಕೆ 20 ವೈಯಕ್ತಿಕ ಕೊಳವೆ ಬಾವಿ ಗುರಿ

ಹಾಗೂ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ ಮತ್ತು ತುಮಕೂರು ಜಿಲ್ಲೆಗಳಲ್ಲಿ ಒಳಪಡುವ ವಿಧಾನಸಭಾ ಕ್ಷೇತ್ರಗಳಿಗೆ ಪ್ರತಿ ಕ್ಷೇತ್ರಕ್ಕೆ 12 ವೈಯಕ್ತಿಕ ಕೊಳವೆ ಬಾವಿ ಗುರಿ ನಿಗದಿ ಪಡಿಸಿ ನಿಗದಿತ ಗುರಿಯಂತೆ ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸಿ ಆಯಾ ಕ್ಷೇತ್ರದ ಮಾನ್ಯ ಶಾಸಕರ ಅಧ್ಯಕ್ಷತೆಯ ಆಯ್ಕೆ ಸಮಿತಿ ಮೂಲಕ ಫಲಾನುಭವಿಗಳ ಆಯ್ಕೆಗೆ ಕ್ರಮವಹಿಸಲಾಗಿರುತ್ತದೆ.

ಈ ಸಾಲಿನ 3967 ಕೊಳವೆ ಬಾವಿಗಳನ್ನು ಕೊರೆಯಲು ನಿಗಮದಿಂದ ದಿನಾಂಕ:11-10-2019ರಂದು ಟೆಂಡರ್ ಆಹ್ವಾನಿಸಿ, ತಾಂತ್ರಿಕ ಬಿಡ್‌ಗಳನ್ನು ದಿನಾಂಕ:27-11-2019ರಂದು ತೆರೆದಿದ್ದು ಟೆಂಡರ್‌ಗಳ ಮೌಲ್ಯ ಮಾಪನ ಕೆಲಸ ಪ್ರಗತಿಯಲ್ಲಿರುತ್ತದೆ. ಆರ್ಥಿಕ ಇಲಾಖೆಯ ಸರ್ಕಾರದ ಆದೇಶ ಸಂಖ್ಯೆ:FD 131 BRS 2019, ಬೆಂಗಳೂರು, ದಿನಾಂಕ:03-12-2019ರಲ್ಲಿ ಗಂಗಾ ಕಲ್ಯಾಣ ಯೋಜನೆಗೆ ಹಂಚಿಕೆ ಮಾಡಿದ್ದ ರೂ.9500.00 ಲಕ್ಷಗಳ ಪೈಕಿ, ರೂ.6000.00 ಲಕ್ಷಗಳನ್ನು ಗಂಗಾ ಕಲ್ಯಾಣ ಯೋಜನೆ ಟೆಂಡರ್ ಪ್ರಕ್ರಿಯೆ ವಿಳಂಬದಿಂದ ಉಳಿತಾಯವಾಗಿರುವುದಾಗಿ ಕಾರಣ ನೀಡಿ ವಿದ್ಯಾರ್ಥಿ ವೇತನ- ಇತರೆ ಖರ್ಚುಗಳಿಗೆ ಪುನರ್ ವಿನಿಯೋಗಕ್ಕೆ ಆದೇಶಿಸಲಾಗಿರುತ್ತದೆ. ಗಂಗಾ ಕಲ್ಯಾಣ ಯೋಜನೆಗೆ ರೂ.3500.00 ಲಕ್ಷಗಳು ಮಾತ್ರ ಲಭ್ಯವಿರುತ್ತದೆ. ಈಗಾಗಲೇ 2019-20ನೇ ಸಾಲಿಗೆ ಕ್ರಿಯಾ ಯೋಜನೆ ರೂಪಿಸಿ ಫಲಾನುಭವಿಗಳ ಆಯ್ಕೆ ಪೂರ್ಣಗೊಳಿಸಿ ಟೆಂಡರ್ ಪ್ರಕ್ರಿಯೆಗೆ ಕ್ರಮವಹಿಸಲಾಗಿದೆ ಹಾಗೂ 2019-20ರ ಸಾಲಿಗೆ ಫಲಾನುಭವಿಗಳ ಆಯ್ಕೆ ಮಾಡಿರುವುದರಿಂದ 2020-21ನೇ ಸಾಲಿಗೆ ಗಂಗಾ ಕಲ್ಯಾಣ ಯೋಜನೆಗೆ ಹೆಚ್ಚುವರಿಯಾಗಿ ಅನುದಾನವನ್ನು ಹಂಚಿಕೆ ಮಾಡಲು ಕೋರಿಕೆ ಸಲ್ಲಿಸಿ, ಈ ಸಾಲಿಗೆ ಒದಗಿಸುವ ಅನುದಾನದ ಮೊತ್ತದಲ್ಲಿ ರೂ.6000.00 ಲಕ್ಷಗಳನ್ನು

2019-20ನೇ ಸಾಲಿಗೆ ಹೊಂದಾಣಿಕೆ ಮಾಡಿಕೊಂಡು ನಂತರ ಉಳಿಯುವ ಮೊತ್ತಕ್ಕೆ ಅನುಗುಣವಾಗಿ ವಿಧಾನಸಭಾ ಕ್ಷೇತ್ರವಾರು ಗುರಿ ನಿಗದಿ ಪಡಿಸಿಕೊಂಡು 2020-21ರ ಸಾಲಿನಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಲು ತೀರ್ಮಾನಿಸಲಾಯಿತು.

<u>ವಿಷಯ ಸಂಖ್ಯೆ- 6 :</u> 2019-20ನೇ ಸಾಲಿನ ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆ ಬಾವಿಗಳನ್ನು ಕೊರೆಯಲು ನಿಗಮದಿಂದ ಆಹ್ವಾನಿಸಿದ್ದ ಟೆಂಡರ್‌ನಲ್ಲಿ ವಿಧಿಸಿರುವ ನಿಬಂಧನೆಗಳನ್ನು ಪ್ರಶ್ನಿಸಿ ಮಾನ್ಯ ಉಚ್ಚನ್ಯಾಯಾಲಯ, ಕಲಬುರಗಿ ಪೀಠ ಇಲ್ಲಿ ಹೂಡಿದ್ದ ರಿಟ್ ಅರ್ಜಿಗೆ ಸಂಬಂಧಿಸಿದಂತೆ ವಕೀಲರ ವೃತ್ತಿ ಶುಲ್ಕ ಪಾವತಿಸಿರುವ ಬಗ್ಗೆ.

<u>ನಿರ್ಣಯ</u>: 2019-20ನೇ ಸಾಲಿನ ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆ ಬಾವಿಗಳನ್ನು ಕೊರೆಯಲು ನಿಗಮದಿಂದ ದಿನಾಂಕ:11-10-2019ರಂದು ಪ್ರಕಟಣೆ ಹೊರಡಿಸಿ ಟೆಂಡರ್ ಆಹ್ವಾನಿಸಲಾಗಿತ್ತು. ಟೆಂಡರ್‌ನಲ್ಲಿ ವಿಧಿಸಿರುವ ನಿಬಂಧನೆಗಳನ್ನು ಪ್ರಶ್ನಿಸಿ ಮೆ||ಶ್ರೀ ಪಂಚಮುಖಿ ಬೋರ್‌ವೆಲ್ಸ್, ರಾಯಚೂರು ರವರು ಮಾನ್ಯ ಉಚ್ಚನ್ಯಾಯಾಲಯ, ಕಲಬುರಗಿ ಪೀಠ ಇಲ್ಲಿ ದಾವೆ ಹೂಡಿದ್ದು ದಾವೆ ಸಂಖ್ಯೆ:205042/2019 ಇರುತ್ತದೆ. ಸದರಿ ರಿಟ್ ಅರ್ಜಿಗೆ ಸಂಬಂಧಿಸಿದಂತೆ ವಿಚಾರಣೆಗಳಲ್ಲಿ ನಿಗಮದ ಪರವಾಗಿ ವಾದ ಮಂಡಿಸಲು ಹೊಳ್ಳ & ಹೊಳ್ಳ, ಬೆಂಗಳೂರು ಇವರನ್ನು ನೇಮಕ ಮಾಡಲಾಗಿತ್ತು. ಹೊಳ್ಳ & ಹೊಳ್ಳ, ಬೆಂಗಳೂರು ರವರು ಸೇವಾ ಶುಲ್ಕದ ಬಾಬ್ತು ರೂ.3.00 ಲಕ್ಷಗಳ ಬಿಲ್ಲು ಸಲ್ಲಿಸಿದ್ದು, ಸದರಿ ಬಿಲ್ಲಿನ ಮೊತ್ತವನ್ನು ನಿಗಮದಿಂದ ಪಾವತಿಸಲಾಗಿರುವುದನ್ನು ಘಟನೋತ್ತರವಾಗಿ ಅನುಮೋದಿಸಲು ತೀರ್ಮಾನಿಸಲಾಯಿತು.

ವಿಷಯ ಸಂಖ್ಯೆ-7 : ಸನ್ಮಾನ್ಯ ಮುಖ್ಯಮಂತ್ರಿಯವರ ಜನತಾ ದರ್ಶನ ಹಾಗೂ ಇ-ಜನಸ್ಪಂದನ ಕಾರ್ಯಕ್ರಮದಲ್ಲಿ ಸಲ್ಲಿಸಲಾದ ಅರ್ಜಿಗಳಿಗೆ ಸಾಲ ಮಂಜೂರಾತಿ ಕುರಿತು.

ನಿರ್ಣಯ: ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವು ಅನುಷ್ಠಾನಗೊಳಿಸುತ್ತಿರುವ ವಿವಿಧ ಸಾಲ ಮತ್ತು ಸಹಾಯಧನ ಯೋಜನೆಗಳಡಿಯಲ್ಲಿ ಸಾಲ ಸೌಲಭ್ಯ ಕೋರಿ ಸನ್ಮಾನ್ಯ ಮುಖ್ಯಮಂತ್ರಿಯವರ ಇ-ಜನಸ್ಪಂದನ ಹಾಗೂ ಸನ್ಮಾನ್ಯ ಮುಖ್ಯಮಂತ್ರಿಯವರ ಕಛೇರಿಯಲ್ಲಿ ಸ್ವೀಕೃತಗೊಂಡ ಮನವಿಗಳಿಗೆ ಸಾಲ ಸೌಲಭ್ಯ ಒದಗಿಸಲು ನಿಗಮಕ್ಕೆ ಆಫ್ ಲೈನ್ ಹಾಗೂ ಆನ್-ಲೈನ್ ಮೂಲಕ ಶಿಫಾರಸ್ಸು ಮಾಡಲಾಗಿರುತ್ತದೆ.

ಶಿಫಾರಸ್ಸು ಮಾಡಲಾದ ಮನವಿಗಳಿಗೆ ಸಾಲ ಮತ್ತು ಸಹಾಯಧನ ಒದಗಿಸಲು 2019-20ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ರೂ.5.00ಕೋಟಿಗಳನ್ನು ಕಾಯ್ದಿರಿಸಿಕೊಳ್ಳಲಾಗಿದೆ. ಆಫ್ ಲೈನ್ ಹಾಗೂ ಆನ್-ಲೈನ್‌ನಲ್ಲಿ ಸ್ವೀಕೃತಗೊಂಡ ಜಿಲ್ಲಾವಾರು ಅರ್ಜಿಗಳ ಸಂಖ್ಯೆ ವಿವರ ಈ ರೀತಿ ಇದೆ.

| ಕ್ರ ಸಂ | ಜಿಲ್ಲೆಯ ಹೆಸರು | ಆಫ್ ಲೈನ್ ಮೂಲಕ ಸ್ವೀಕೃತಗೊಂಡ ಮನವಿಗಳ ಸಂಖ್ಯೆ | ಆನ್- ಲೈನ್ ಮೂಲಕ ಸ್ವೀಕೃತಗೊಂಡ ಮನವಿಗಳ ಸಂಖ್ಯೆ (ಇ-ಜನಸ್ಪಂದನ) | ಒಟ್ಟು ದಿ.26/11/2019ರ ಅಂತ್ಯಕ್ಕೆ) |
|---|---|---|---|---|
| 1 | ಬೆಂಗಳೂರು ಉತ್ತರ | 27 | 3 | 30 |
| 2 | ಬೆಂಗಳೂರು ದಕ್ಷಿಣ | 5 | 3 | 8 |
| 3 | ಬೆಂಗಳೂರು ಗ್ರಾಮಾಂತರ | 12 | | 12 |
| 4 | ರಾಮನಗರ | 11 | | 11 |
| 5 | ಶಿವಮೊಗ್ಗ | 4 | 2 | 6 |
| 6 | ತುಮಕೂರು | 8 | 8 | 16 |
| 7 | ಚಿತ್ರದುರ್ಗ | 6 | | 6 |
| 8 | ಕೋಲಾರ | 1 | 1 | 2 |
| 9 | ಚಿಕ್ಕಬಳ್ಳಾಪುರ | | 3 | 3 |
| 10 | ದಾವಣಗೆರೆ | 6 | 3 | 9 |

| | | | | |
|---|---|---|---|---|
| 11 | ಮೈಸೂರು | 13 | | 13 |
| 12 | ಮಂಡ್ಯ | 1 | 3 | 4 |
| 13 | ಚಾಮರಾಜನಗರ | 1 | 2 | 3 |
| 14 | ಉಡುಪಿ | 1 | | 1 |
| 15 | ಹಾಸನ | 2 | | 2 |
| 16 | ಚಿಕ್ಕಮಗಳೂರು | 1 | 2 | 3 |
| 17 | ದಕ್ಷಿಣ ಕನ್ನಡ | | | 0 |
| 18 | ಕೊಡಗು | | | 0 |
| 19 | ಬೆಳಗಾವಿ | 6 | 8 | 14 |
| 20 | ಹಾವೇರಿ | 1 | 3 | 4 |
| 21 | ಗದಗ | 1 | 8 | 9 |
| 22 | ಬಿಜಾಪುರ | 3 | 16 | 19 |
| 23 | ಬಾಗಲಕೋಟೆ | 2 | | 2 |
| 24 | ಧಾರವಾಡ | | 2 | 2 |
| 25 | ಉತ್ತರ ಕನ್ನಡ | | | 0 |
| 26 | ಕಲಬುರಗಿ | 10 | | 10 |
| 27 | ಬಳ್ಳಾರಿ | 4 | 3 | 7 |
| 28 | ಬೀದರ್ | 3 | | 3 |
| 29 | ರಾಯಚೂರು | 4 | 6 | 10 |
| 30 | ಕೊಪ್ಪಳ | | | 0 |
| 31 | ಯಾದಗಿರಿ | 1 | | 1 |
| | ಎಲ್ಲಾ ಒಟ್ಟು | 134 | 76 | 210 |

ಮೇಲ್ಕಾಣಿಸಿದಂತೆ, ಆಫ್-ಲೈನ್ ನಲ್ಲಿ 134 ಅರ್ಜಿಗಳು, ಆನ್-ಲೈನ್‌ನಲ್ಲಿ-76 ಅರ್ಜಿಗಳು ಹೀಗೆ ಒಟ್ಟು 210 ಅರ್ಜಿಗಳು ಸ್ವೀಕೃತಗೊಂಡಿದ್ದು, ಈ ಅರ್ಜಿಗಳಲ್ಲಿನ ಫಲಾಪೇಕ್ಷಿಗಳಿಗೆ ಸಾಲ ಸೌಲಭ್ಯ ಒದಗಿಸುವುದು ಅವಶ್ಯವಾಗಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ:ಬಿಸಿಡಬ್ಲ್ಯೂ/907/ಬಿಎಂಎಸ್/2015 ಬೆಂಗಳೂರು ದಿನಾಂಕ 07/09/2015ರ ಅನ್ವಯ ಸನ್ಮಾನ್ಯ ಮುಖ್ಯಮಂತ್ರಿಯವರ ಜನತಾ ದರ್ಶನ, ಜನಸ್ಪಂದನ ಕಾರ್ಯಕ್ರಮ ಹಾಗೂ ಸನ್ಮಾನ್ಯ ಮುಖ್ಯಮಂತ್ರಿಯವರ ಕಛೇರಿಗೆ ಸಲ್ಲಿಸಲಾಗಿರುವ ಮನವಿಗಳಿಗೆ ನಿಗಮದ ನಿರ್ದೇಶಕ ಮಂಡಳಿಯಿಂದ ಸಾಲ ಮತ್ತು ಸಹಾಯಧನ ಮಂಜೂರು ಮಾಡಲು ವಿಶೇಷ ಪ್ರಕರಣವೆಂದು ಪರಿಗಣಿಸಿ ನಿರ್ದೇಶಕ ಮಂಡಳಿಯಿಂದ ಮಂಜೂರಾತಿ ಪಡೆದು ಬಿಡುಗಡೆ ಮಾಡಲು ಆದೇಶಿಸಿದೆ. ಈ ಸಂಬಂಧ ಆಫ್ ಲೈನ್ ಮತ್ತು ಆನ್ ಲೈನ್ ನಲ್ಲಿ ಸ್ವೀಕರಿಸಿದ ಒಟ್ಟು 210 ಅರ್ಜಿಗಳಿಗೆ ಇವರ ಜಾತಿ, ಆದಾಯ ಮತ್ತು ಇತರ ಅರ್ಹತೆಗಳನ್ನು ಪರಿಶೀಲಿಸಿ, ದೃಢೀಕರಿಸಿಕೊಂಡು ಗರಿಷ್ಟ ತಲಾ ರೂ.50,000/-ಗಳ ಸಾಲ ಮತ್ತು ಸಹಾಯಧನ ಮಂಜೂರು ಮಾಡಲು ವ್ಯವಸ್ಥಾಪಕ ನಿರ್ದೇಶಕರಿಗೆ ಅಧಿಕಾರ ನೀಡಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ವಿಷಯ ಸಂಖ್ಯೆ-8 : ದೇವರಾಜ ಅರಸು ಭವನದ ವಾರ್ಷಿಕ ನಿರ್ವಾಹಣೆಗೆ ರೂ.30.00 ಲಕ್ಷಗಳನ್ನು 2 ಕಂತುಗಳಲ್ಲಿ ನಿಗಮದ ವತಿಯಿಂದ ದೇವರಾಜ ಅರಸು ಮೆಮೋರಿಯಲ್ ಟ್ರಸ್ಟ್‌ಗೆ ಪಾವತಿಸುವ ಕುರಿತು.

ನಿರ್ಣಯ: ದಿನಾಂಕ:04.10.2019 ರಂದು ಮಾನ್ಯ ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ದೇವರಾಜ ಅರಸು ಭವನದ ವಾರ್ಷಿಕ ನಿರ್ವಾಹಣೆಯ ಸಭೆಯ ನಡವಳಿಯನ್ವಯ ದೇವರಾಜ ಅರಸು ಭವನದ ವಾರ್ಷಿಕ ನಿರ್ವಾಹಣೆಗೆ ಅಂದಾಜು ರೂ. 1.00 ಕೋಟಿ ವೆಚ್ಚವಾಗಲಿದ್ದು, ಈ ಪೈಕಿ ಶೇ.30% ಅಂದರೆ ರೂ.30.00 ಲಕ್ಷಗಳನ್ನು 2 ಕಂತುಗಳಲ್ಲಿ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ವತಿಯಿಂದ ದೇವರಾಜ ಅರಸು ಮೆಮೋರಿಯಲ್ ಟ್ರಸ್ಟ್‌ಗೆ ಪಾವತಿಸಲು ತೀರ್ಮಾನಿಸಲಾಗಿರುತ್ತದೆ.

ಮಾನ್ಯ ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇವರು ದಿನಾಂಕ:27.11.2019ರ ಪತ್ರದಲ್ಲಿ ಮೊದಲನೇ ಕಂತಿನ ಹಣ ಬಿಡುಗಡೆ ಮಾಡುವಂತೆ ಕೋರಿರುತ್ತಾರೆ. ದೇವರಾಜ ಅರಸು ಭವನದ ನಿರ್ವಹಣೆಗೆ ಮೊದಲ ಹಂತದಲ್ಲಿ ರೂ.15.00 ಲಕ್ಷಗಳನ್ನು ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ದೇವರಾಜ ಅರಸು ಮೆಮೋರಿಯಲ್ ಟ್ರಸ್ಟ್‌ಗೆ ಮುಂಗಡವಾಗಿ ಪಾವತಿಸಲು ತೀರ್ಮಾನಿಸಲಾಯಿತು.

ವಿಷಯ ಸಂಖ್ಯೆ- 9: ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಕೇಂದ್ರ ಕಛೇರಿ/ವಿಭಾಗೀಯ ಕಛೇರಿ ಹಾಗೂ ಜಿಲ್ಲಾ ಕಛೇರಿಗಳಲ್ಲಿ ಹಳೆಯ ಕಡತಗಳನ್ನು ವಿಲೇವಾರಿ ಮಾಡುವ ಕುರಿತು.

ನಿರ್ಣಯ: ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಪ್ರಾರಂಭವಾದಾಗಿನಿಂದ ಈವರೆಗೆ ಹಲವಾರು ಯೋಜನೆಗಳಡಿಯಲ್ಲಿ ಸಾಕಷ್ಟು ಕಡತಗಳನ್ನು ತೆರೆಯಲಾಗಿದೆ. ಕಡತಗಳ ಸಂಖ್ಯೆ ಅತಿಯಾಗಿ

ಹೆಚ್ಚಾಗಿರುವುದರಿಂದ ಇವುಗಳನ್ನು ನಿಗಮದಲ್ಲಿ ಶೇಖರಿಸಿಡಲು ಸ್ಥಳಾವಕಾಶವಿರುವುದಿಲ್ಲ. ಸರ್ಕಾರದ ಆದೇಶ ಸಂಖ್ಯೆ: ಹಿಂವಕ 374 ಬಿಎಂಎಸ್ 2013 ದಿನಾಂಕ:15.05.2013ರಲ್ಲಿ ನಿಗಮದ ಸಾಲ ಯೋಜನೆಗಳಡಿ 1979-80 ರಿಂದ ದಿನಾಂಕ:13.05.2013 ರವರೆಗಿನ ಎಲ್ಲಾ ಸಾಲ ಯೋಜನೆಗಳಡಿ ಮರುಪಾವತಿಸಬೇಕಾದ ಅಸಲು ಮತ್ತು ಬಡ್ಡಿ ಮನ್ನಾ ಮಾಡಲಾಗಿರುತ್ತದೆ. 1979-80 ರಿಂದ 13-05-2013ರ ವರೆಗೆ ಹಿಂದುಳಿದ ವರ್ಗಗಳ ಜನರಿಗೆ ಸಾಲಸೌಲಭ್ಯಗಳ ಸಾಲದ ಖಾತಾ ಪುಸ್ತಕಗಳು ಇರುತ್ತದೆ. ನಿಗಮದ ಕೇಂದ್ರ ಕಛೇರಿ, ವಿಭಾಗೀಯ ಕಛೇರಿ ಹಾಗೂ ಜಿಲ್ಲಾ ಕಛೇರಿಗಳಲ್ಲಿ ಈ ದಿನಾಂಕಕ್ಕಿಂತ ಹಿಂದಿನ ಕಡತಗಳಲ್ಲಿ ಸ್ಥಿರಾಸ್ತಿಯನ್ನು ಅಡಮಾನ ಮಾಡಿದ ಕಡತಗಳನ್ನು ಮತ್ತು ಕೋರ್ಟ್ ಕೇಸ್‌ಗೆ ಸಂಬಂಧಿಸಿದ ಕಡತಗಳನ್ನು ಹೊರತುಪಡಿಸಿ ಉಳಿದ ಕಡತಗಳನ್ನು ಸಂರಕ್ಷಿಸಿಟ್ಟುಕೊಳ್ಳುವ ಅವಶ್ಯಕತೆ ಕಂಡುಬರುವುದಿಲ್ಲ ಇಂತಹ ಕಡತಗಳಲ್ಲಿರುವ ಮಾಹಿತಿಗಳನ್ನು ಒಂದು ಕಡೆ ಪಟ್ಟಿ ಮಾಡಿಟ್ಟುಕೊಂಡು ಸಾಲದ ಖಾತಾ ಪುಸ್ತಕಗಳನ್ನು ಸ್ಥಿರಾಸ್ತಿ ಅಡಮಾಸ ಹಾಗೂ ಕೋರ್ಟ್ ಕೇಸ್ ಇರುವ ಕಡತಗಳನ್ನು ಹೊರತುಪಡಿಸಿ ಹಳೆಯ ಕಡತಗಳನ್ನು ವಿಲೇವಾರಿ ಮಾಡಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

<u>ವಿಷಯ ಸಂಖ್ಯೆ-10 :</u> 2019-20ರ ಸಾಲಿಗೆ ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮದಿಂದ ಸಾಲ ಪಡೆಯಲು ರೂ.15.00 ಕೋಟಿಗಳ ಸರ್ಕಾರದ ಗ್ಯಾರಂಟಿಯನ್ನು ಪಡೆದಿರುವ ಬಗ್ಗೆ.

<u>ನಿರ್ಣಯ:</u> ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮವು ಭಾರತ ಸರ್ಕಾರದ ಸಂಸ್ಥೆಯಾಗಿದೆ. ಈ ನಿಗಮವು ರಾಜ್ಯಗಳ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಗಳ ಮೂಲಕ ಹಿಂದುಳಿದ ವರ್ಗಗಳ ಜನರಿಗೆ

ಸ್ವಯಂ ಉದ್ಯೋಗ ಕೈಗೊಳ್ಳಲು ಸಾಲ ಸೌಲಭ್ಯವನ್ನು ರಿಯಾಯಿತಿ ಬಡ್ಡಿದರದಲ್ಲಿ ನೀಡುತ್ತದೆ. ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮದಿಂದ ಸಾಲವನ್ನು ಪಡೆಯಲು ಸರ್ಕಾರವು ಆದೇಶ ಸಂಖ್ಯೆ ಬಿಸಿಡಬ್ಲ್ಯೂ 754 ಬಿಎಂಎಸ್ 2018, ದಿನಾಂಕ 20-11-2019 ರಲ್ಲಿ ರೂ.15.00 ಕೋಟಿಗಳ ಸರ್ಕಾರದ ಗ್ಯಾರಂಟಿಯನ್ನು ಒದಗಿಸಿರುತ್ತದೆ.

2019-20ರ ಸಾಲಿಗೆ ರೂ.15.00 ಕೋಟಿಗಳಲ್ಲಿ 4170 ಹಿಂದುಳಿದ ವರ್ಗಗಳ ಜನರಿಗೆ ಸಾಲ ಸೌಲಭ್ಯ ಒದಗಿಸಲು ಕ್ರಿಯಾ ಯೋಜನೆಯನ್ನು ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮವು ಅನುಮೋದಿಸಿದೆ. ಯೋಜನಾವಾರು ವಿವರ ಈ ರೀತಿ ಇದೆ:

**(Rs. in lakh)**

| Sl . No. | Scheme | No. of Benf. | Amt. |
|---|---|---|---|
| A | Term Loan(General Loan) | | |
| 1 | Agriculture & Allied | 177 | 108.00 |
| 2 | Small Business | 74 | 30.00 |
| 3 | Service Sector | 79 | 20.00 |
| 4 | Transport Sector | 25 | 50.00 |
| 5(a) | Education Loan (India) | 25 | 25.00 |
| (b) | Education Loan (abroad) | 10 | 17.00 |
| 6 | New Swarnima Scheme | 200 | 100.00 |
| B | Micro Finance Scheme | | |
| 1 | Micro Finance Scheme | 780 | 250.00 |
| 2 | Mahila Samridhhi Yojana | 2500 | 750.00 |
| 3 | Small Loan | 300 | 150.00 |
| | **TOTAL** | **4170** | **1500.00** |

ಈ ಯೋಜನೆ ಅನುಷ್ಠಾನಗೊಳಿಸಲು ಅರ್ಹ ಫಲಾನುಭವಿಗಳಿಂದ ಅರ್ಜಿಗಳನ್ನು ಆಹ್ವಾನಿಸಲು ಪ್ರಕಟಣೆ ನೀಡಿ, ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮದಿಂದ ಸಾಲ ಪಡೆದು, ಆಯ್ಕೆ ಸಮಿತಿಗಳು ಆಯ್ಕೆ ಮಾಡಿದ ಅರ್ಹ ಫಲಾನುಭವಿಗಳಿಗೆ ಸಾಲ ಸೌಲಭ್ಯ ಮಂಜೂರು ಮಾಡಲು ಅಗತ್ಯಕ್ರಮ ಕೈಗೊಳ್ಳಲು ವ್ಯವಸ್ಥಾಪಕ ನಿರ್ದೇಶಕರಿಗೆ ಅಧಿಕಾರ ನೀಡುವುದೆಂದು ತೀರ್ಮಾನಿಸಲಾಯಿತು.

<u>ವಿಷಯ ಸಂಖ್ಯೆ-11:</u> ನಿಗಮದ ಅಧಿಕೃತ ಷೇರುಬಂಡವಾಳವನ್ನು ರೂ.500.00 ಕೋಟಿಗಳಿಂದ ರೂ.550.00 ಕೋಟಿಗಳಿಗೆ ಹೆಚ್ಚಿಸಿರುವುದನ್ನು ದಾಖಲು ಮಾಡುವುದು.

<u>ನಿರ್ಣಯ:</u> ಸರ್ಕಾರದ ಆದೇಶ ಸಂಖ್ಯೆ ಬಿಸಿಡಬ್ಲ್ಯೂ 81 ಬಿಎಂಎಸ್ 2019 ಬೆಂಗಳೂರು ದಿನಾಂಕ: 18-11-2019ರಲ್ಲಿ ಸರ್ಕಾರವು ನಿಗಮದ ಅಧಿಕೃತ ಷೇರು ಬಂಡವಾಳವನ್ನು ರೂ.500.00 ಕೋಟಿಗಳಿಂದ ರೂ. 550.00 ಕೋಟಿಗಳಿಗೆ ಹೆಚ್ಚಿಸಿ ಆದೇಶಿಸಿದೆ. ಅಧಿಕೃತ ಷೇರು ಬಂಡವಾಳ ಹೆಚ್ಚಳ ಮಾಡಿರುವುದರಿಂದ ನಿಗಮದ ಮೆಮೊರ್‍ಯಾಡಂ ಮತ್ತು ಆರ್ಟಿಕಲ್ಸ್ ಆಫ್ ಅಸೋಸಿಯೇಶನ್‌ನ **Capital Clause**ನ್ನು ಬದಲಾವಣೆ ಮಾಡಬೇಕಾಗುವುದು. ನಿಗಮದ 42ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಷೇರು ಬಂಡವಾಳ ಹೆಚ್ಚಿದ ಬಗ್ಗೆ ವಿಷಯವನ್ನು ಇರಿಸಿ, ನಂತರ ರಿಜಿಸ್ಟ್ರಾರ್ ಆಫ್ ಕಂಪನೀಸ್ ಇವರಲ್ಲಿ ಈ ಅಧಿಕೃತ ಷೇರು ಬಂಡವಾಳವನ್ನು ಹೆಚ್ಚಿಸಿದ ಬಗ್ಗೆ ದಾಖಲು ಮಾಡಲು ತೀರ್ಮಾನಿಸಲಾಯಿತು.

<u>ವಿಷಯ ಸಂಖ್ಯೆ-12:</u> 2018-19ನೇ ಸಾಲಿನ ನಿರ್ದೇಶಕರುಗಳ ವರದಿಯನ್ನು ಅನುಮೋದಿಸುವುದು.

<u>ನಿರ್ಣಯ:</u> ಕಂಪನಿ ಕಾಯ್ದೆ 2013ರ ಸೆಕ್ಷನ್ 134 ರನ್ವಯ 2018-19ನೇ ಸಾಲಿನ ವಾರ್ಷಿಕ ಲೆಕ್ಕ ಪತ್ರಗಳಿಗೆ ನಿಗಮದ ಕಾರ್ಯ ಚಟುವಟಿಕೆಗಳನ್ನೊಳಗೊಂಡ ನಿರ್ದೇಶಕರುಗಳ ವರದಿಯನ್ನು ಲಗತ್ತಿಸಬೇಕು. ಈ ಸಾಲಿನ ನಿರ್ದೇಶಕರುಗಳ ವರದಿಯನ್ನು ಅನುಮೋದಿಸುವುದೆಂದು ಹಾಗೂ ಅನುಮೋದಿಸಲ್ಪಟ್ಟ ನಿರ್ದೇಶಕರುಗಳ ವರದಿಗೆ ನಿರ್ದೇಶಕ ಮಂಡಳಿ ಪರವಾಗಿ ನಿಗಮದ ಅಧ್ಯಕ್ಷರು ಧೃಡೀಕರಿಸಲು ತೀರ್ಮಾನಿಸಲಾಯಿತು.

ವಿಷಯ ಸಂಖ್ಯೆ- 13: ನಿಗಮದ 2018-19ನೇ ಸಾಲಿನ ಲೆಕ್ಕ ಪತ್ರಗಳ ಮೇಲಿನ ಮಹಾಲೇಖಪಾಲರ ವರದಿಯನ್ನು ಮಂಡಳಿಯ ಗಮನಕ್ಕೆ ತರುವುದು.

ನಿರ್ಣಯ: ಕಂಪನಿ ಕಾಯ್ದೆ 2013ರ ಸೆಕ್ಷನ್ 134ರಂತೆ, ಸಿ & ಎ.ಜಿ ಇವರ ಪರವಾಗಿ ಮಹಾಲೇಖಪಾಲರು, ಕರ್ನಾಟಕ ಇವರು ನಿಗಮದ 2018-19ನೇ ವಾರ್ಷಿಕ ಲೆಕ್ಕ ಪತ್ರಗಳನ್ನು ಪರಿಶೀಲಿಸಿ ದಿನಾಂಕ 26-11-2019ರಂದು ವರದಿ ನೀಡಿರುವುದನ್ನು ಗಮನಿಸಿ, ದಾಖಲಿಸಲು ತೀರ್ಮಾನಿಸಲಾಯಿತು.

ವಿಷಯ ಸಂಖ್ಯೆ-14: 2018-19ರ ಸಾಲಿಗೆ ಶಾಸನಬದ್ಧ ಲೆಕ್ಕ ತಪಾಸಿಗರ ವರದಿಯಲ್ಲಿಯ ಆಕ್ಷೇಪಣೆಗಳಿಗೆ (Audit observations) ಮಂಡಳಿಯ ಉತ್ತರ.

ನಿರ್ಣಯ: ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್ ಆಫ್ ಇಂಡಿಯಾ, ನವದೆಹಲಿ ಇವರು ನಿಗಮದ 2018-19ರ ಸಾಲಿನ ಲೆಕ್ಕ ಪತ್ರಗಳನ್ನು ಪರಿಶೀಲಿಸಲು ಮೆ॥ಎಂ.ಎ.ನರಸಿಂಹನ್ ಅಂಡ್ ಕಂ., ಚಾರ್ಟಡ್ ಅಕೌಂಟೆಂಟ್ಸ್ ಇವರನ್ನು ಶಾಸನಬದ್ಧ ಲೆಕ್ಕತಪಾಸಿಗರಾಗಿ ನೇಮಕಾತಿ ಮಾಡಿದ್ದು, ಇವರು ನಿಗಮದ 2018-19ರ ಸಾಲಿನ ಲೆಕ್ಕಪತ್ರಗಳನ್ನು ತಪಾಸಣೆ ಮಾಡಿ ದಿನಾಂಕ 24-09-2019ರಂದು ವರದಿಯನ್ನು ನೀಡಿರುತ್ತಾರೆ. ಶಾಸನಬದ್ಧ ಲೆಕ್ಕ ತಪಾಸಿಗರ ವರದಿಯಲ್ಲಿಯ ಆಕ್ಷೇಪಣೆಗಳಿಗೆ ನಿರ್ದೇಶಕ ಮಂಡಳಿಯ ಉತ್ತರವನ್ನು ಅನುಮೋದಿಸುವುದೆಂದು ಹಾಗೂ ಅನುಮೋದಿಸಲ್ಪಟ್ಟ ಉತ್ತರಗಳಿಗೆ ನಿರ್ದೇಶಕ ಮಂಡಳಿ ಪರವಾಗಿ ವ್ಯವಸ್ಥಾಪಕ ನಿರ್ದೇಶಕರು ಧೃಡೀಕರಿಸಲು ತೀರ್ಮಾನಿಸಲಾಯಿತು.

<u>ವಿಷಯ ಸಂಖ್ಯೆ-15:</u> ವಾರ್ಷಿಕ ಸಾಮಾನ್ಯ ಸಭೆಯ ದಿನಾಂಕದಂದು ನಿಗಮದ ಷೇರುಗಳನ್ನು ಹೊಂದಿರುವ ಷೇರುದಾರರ ವಿವರಗಳನ್ನು ದಾಖಲಿಸುವುದು.

<u>ನಿರ್ಣಯ:</u> ಪ್ರಸ್ತುತ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಲ್ಲಿ ಈ ಕೆಳಕಂಡ ಷೇರುದಾರರು ಇರುತ್ತಾರೆ.

| ಕ್ರ ಸಂ. | ಪದನಾಮ | ಹೊಂದಿರುವ ಷೇರುಗಳ ಸಂಖ್ಯೆ | ಷೇರುಗಳ ಮೌಲ್ಯ ರೂ. |
|---|---|---|---|
| 1. | ಘನವೆತ್ತ ಮಾನ್ಯ ರಾಜ್ಯಪಾಲರು, ಕರ್ನಾಟಕ. | 34171400 | 3417140000 |
| 2. | ಸರ್ಕಾರದ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು. | 4 | 400 |
| 3. | ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು. | 2 | 200 |
| 4. | ಉಪಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಕಾಸಸೌಧ, ಬೆಂಗಳೂರು. | 2 | 200 |
| 5. | ವ್ಯವಸ್ಥಾಪಕ ನಿರ್ದೇಶಕರು, ಡಿ.ಬಿ.ಸಿ.ಡಿ.ಸಿ. ಬೆಂಗಳೂರು. | 2 | 200 |
| | ಒಟ್ಟು | **34171410** | **3417141000** |

ಈ ಷೇರುದಾರರ ವಿವರಗಳನ್ನು ದಾಖಲಿಸಲು ತೀರ್ಮಾನಿಸಲಾಯಿತು.

<u>ವಿಷಯ ಸಂಖ್ಯೆ-16:</u> 2019-20ರ ಸಾಲಿನ ಶಾಸನಬದ್ಧ ಲೆಕ್ಕತಪಾಸಿಗರ ನೇಮಕಾತಿಯನ್ನು ದಾಖಲು ಮಾಡುವುದು.

<u>ನಿರ್ಣಯ:</u> 2019-20ನೇ ಸಾಲಿಗೆ ನಿಗಮದ ಲೆಕ್ಕ ಪತ್ರಗಳನ್ನು ಪರಿಶೀಲಿಸಲು ಶಾಸನಬದ್ಧ ಲೆಕ್ಕ ಪರಿಶೋಧಕರಾಗಿ ರಾಜಗೋಪಾಲ್ ಅಂಡ್ ಬದರಿ ನಾರಾಯಣನ್, ಚಾರ್ಟರ್ಡ್ ಅಕೌಂಟೆಂಟ್ಸ್ ನಂ. 15/1, ಮೊದಲನೇ ಮಹಡಿ, 2ನೇ ಮುಖ್ಯ ರಸ್ತೆ, ವೈಯಾಲಿ ಕಾವಲ್, ಬೆಂಗಳೂರು-560003 ಇವರನ್ನು ಕಂಪ್ಟ್ರೋಲರ್ ಅಂಡ್ ಆಡಿಟ್ ಜನರಲ್ ಆಫ್ ಇಂಡಿಯಾ, ನವದೆಹಲಿ ಇವರು ಅವರ ಪತ್ರದ ಸಂಖ್ಯೆ CA.V/COY/KARNATAKA,KNBACK/(1)/990 ದಿನಾಂಕ 16-08-2019 ರಲ್ಲಿ ನೇಮಕ

ಮಾಡಿರುತ್ತಾರೆ. ಶಾಸನಬದ್ಧ ಲೆಕ್ಕ ತಪಾಸಿಗರ ನೇಮಕಾತಿಯನ್ನು ದಾಖಲು ರಿಜಿಸ್ಟ್ರಾರ್ ಆಫ್ ಕಂಪನೀಸ್ ಇಲ್ಲಿ ದಾಖಲಿಸಲು ತೀರ್ಮಾನಿಸಲಾಯಿತು.

<u>ವಿಷಯ ಸಂಖ್ಯೆ-17:</u> ಸರ್ಕಾರ ಮಂಜೂರು ಮಾಡಿರುವ ತುಟ್ಟಿ ಭತ್ಯೆಯ ಹೆಚ್ಚಳವನ್ನು ನಿಗಮದ ನೌಕರರಿಗೆ ಮಂಜೂರು ಮಾಡುವ ಕುರಿತು.

<u>ನಿರ್ಣಯ:</u> ಸರ್ಕಾರದ ಆದೇಶ ಸಂಖ್ಯೆ: ಆಇ 15 ಎಸ್‌ಆರ್‌ಪಿ 2019 ದಿನಾಂಕ 19-10-2019 ರಲ್ಲಿ ಸರ್ಕಾರವು ರಾಜ್ಯ ಸರ್ಕಾರಿ ನೌಕರರಿಗೆ ತುಟ್ಟಿ ಭತ್ಯೆ ದರವನ್ನು ಮೂಲ ವೇತನದ ಶೇಕಡ 6.50 ರಿಂದ 11.25ಕ್ಕೆ ಹೆಚ್ಚಿಸಿ ದಿನಾಂಕ 01-07-2019 ರಿಂದ ಜಾರಿಗೆ ಬರುವಂತೆ ಮಂಜೂರು ಮಾಡಿರುತ್ತದೆ. ಈ ಹೆಚ್ಚುವರಿ ತುಟ್ಟಿ ಭತ್ಯೆ ಮಂಜೂರಾತಿಯಿಂದ ನಿಗಮಕ್ಕೆ ಮಾಸಿಕ ಸುಮಾರು ರೂ.85,000/- ಹೆಚ್ಚುವರಿ ವೆಚ್ಚವಾಗುವುದು. ಈ ವೆಚ್ಚವನ್ನು ನಿಗಮವು ಗಳಿಸುವ ಆದಾಯದಿಂದ ಭರಿಸಲಾಗುತ್ತಿದೆ. ನಿಗಮದ ನೌಕರರಿಗೆ ಪರಿಷ್ಕೃತ ದರದಲ್ಲಿ ತುಟ್ಟಿಭತ್ಯೆ ಪಾವತಿಗೆ ಮಂಜೂರಾತಿ ನೀಡಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

<u>ವಿಷಯ ಸಂಖ್ಯೆ-18:</u> ನಿಗಮದ ಅಧಿಕಾರಿ/ನೌಕರರಿಗೆ ಮುಂಬಡ್ತಿ ನೀಡಿರುವುದನ್ನು ನಿರ್ದೇಶಕ ಮಂಡಳಿಯ ಸಭೆಗೆ ಮಂಡಿಸುವ ಕುರಿತು

<u>ನಿರ್ಣಯ:</u> ಇಲಾಖಾ ಮುಂಬಡ್ತಿ ಸಮಿತಿಯ ದಿನಾಂಕ:24.09.2018ರ ಸಭೆಯ ನಡವಳಿಗಳನ್ವಯ ನಿಗಮದ ದಿನಾಂಕ:28.02.2019ರ ಅಧಿಸೂಚನೆ ಸಂಖ್ಯೆ:ದೇಹಿನಿ/ಸಿಬ್ಬಂದಿ/ಮುಂಬಡ್ತಿ/ಸಿಆರ್-34/2018-19ರಲ್ಲಿ ನಿಗಮದ ಧಾರವಾಡ ಜಿಲ್ಲಾ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಶ್ರೀಎನ್.ಎಸ್.ತವನಪ್ಪನವರ್, ಇವರಿಗೆ ಜಿಲ್ಲಾ ವ್ಯವಸ್ಥಾಪಕರ ಹುದ್ದೆಯಿಂದ (ವೇತನ ಶ್ರೇಣಿ ರೂ.43,100-83,900) ಸಹಾಯಕ ಪ್ರಧಾನ ವ್ಯವಸ್ಥಾಪಕರ ಹುದ್ದೆಗೆ (ವೇತನ ಶ್ರೇಣಿ ರೂ.52,650-97,100)ಮುಂಬಡ್ತಿ ನೀಡಿ ಬೆಳಗಾವಿ ವಿಭಾಗದಲ್ಲಿ ಖಾಲಿ ಇರುವ ಸಹಾಯಕ ಪ್ರಧಾನ ವ್ಯವಸ್ಥಾಪಕರ ಹುದ್ದೆಗೆ ನಿಯೋಜಿಸಲಾಗಿರುತ್ತದೆ ಹಾಗೂ ಕಲಬುರಗಿ ವಿಭಾಗ ಕಛೇರಿಯಲ್ಲಿ ಪ್ರಭಾರ ಸಹಾಯಕ ಪ್ರಧಾನ ವ್ಯವಸ್ಥಾಪಕರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ನಾರಾಯಣ ಮೇರಲಿ,

ಇವರಿಗೆ ಜಿಲ್ಲಾ ವ್ಯವಸ್ಥಾಪಕರ ಹುದ್ದೆಯಿಂದ (ವೇತನ ಶ್ರೇಣಿ ರೂ.43,100-83,900) ಸಹಾಯಕ ಪ್ರಧಾನ ವ್ಯವಸ್ಥಾಪಕರ ಹುದ್ದೆಗೆ (ವೇತನ ಶ್ರೇಣಿ ರೂ.52,650-97,100)ಮುಂಬಡ್ತಿ ನೀಡಿ ಕಲಬುರಗಿ ವಿಭಾಗದಲ್ಲಿ ಖಾಲಿ ಇರುವ ಸಹಾಯಕ ಪ್ರಧಾನ ವ್ಯವಸ್ಥಾಪಕರ ಹುದ್ದೆಗೆ ನಿಯೋಜಿಸಲಾಗಿರುತ್ತದೆ.

ನಿಗಮದದಿನಾಂಕ:28.02.2019ರ ಅಧಿಸೂಚನೆ ಸಂಖ್ಯೆ:ದೇಹಿನಿ/ ಸಿಬ್ಬಂದಿ/ಮುಂಬಡ್ತಿ/ಸಿಆರ್-34/2018-19ರಲ್ಲಿ ಕೇಂದ್ರ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಹೆಚ್.ಸಿ.ಸಾತ್ವಿಕ್, ಇವರನ್ನು ದ್ವಿತೀಯ ದರ್ಜೆ ಸಹಾಯಕ ಹುದ್ದೆಯಿಂದ (ವೇತನ ಶ್ರೇಣಿ ರೂ.21,400-42,000) ಪ್ರಥಮ ದರ್ಜೆ ಸಹಾಯಕ/ ಸಹಾಯಕ ಅಭಿವೃದ್ಧಿ ಅಧಿಕಾರಿ ಹುದ್ದೆಗೆ (ವೇತನ ಶ್ರೇಣಿ ರೂ.27,650-52,650)ಮುಂಬಡ್ತಿ ನೀಡಿ ನಿಗಮದ ಕೇಂದ್ರ ಕಛೇರಿಯಲ್ಲಿ ಖಾಲಿ ಇರುವ ಪ್ರಥಮ ದರ್ಜೆ ಸಹಾಯಕ ಹುದ್ದೆಗೆ ಸ್ಥಳ ನಿಯುಕ್ತಿಗೊಳಿಸಲಾಗಿದೆ.

ಮೇಲ್ಕಂಡಂತೆ ಮುಂಬಡ್ತಿ ನೀಡಿರುವುದನ್ನು ಸ್ಥಿರೀಕರಿಸಲು ಹಾಗೂ ಮುಂಬಡ್ತಿ ಹೊಂದಿದ ಸದರಿ 3 ಅಧಿಕಾರಿ/ನೌಕರರಿಗೆ ಮುಂಬಡ್ತಿ ಹೊಂದಿದ ವೇತನ ಶ್ರೇಣಿಯಲ್ಲಿ ಮೂಲ ವೇತನ ನಿಗದಿಪಡಿಸಲು ವ್ಯವಸ್ಥಾಪಕ ನಿರ್ದೇಶಕರಿಗೆ ಅಧಿಕಾರ ನೀಡುವುದೆಂದು ತೀರ್ಮಾನಿಸಲಾಯಿತು.

<u>ವಿಷಯ ಸಂಖ್ಯೆ-19:</u> ಮೈಸೂರು ಪೇಪರ್ ಮಿಲ್ಸ್‌ನ ಲಿಮಿಟೆಡ್ ನಿಯಮಿತದ ಉದ್ಯೋಗಿಗಳನ್ನು ನಿಯೋಜನೆ ಮೇಲೆ ನಿಗಮಕ್ಕೆ ಪಡೆಯುವ ಬಗ್ಗೆ.

<u>ನಿರ್ಣಯ:</u> ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಲ್ಲಿ ಖಾಲಿ ಇರುವ 201 ಗ್ರೂಪ್ 'ಸಿ' ಹುದ್ದೆಗಳನ್ನು ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಭರ್ತಿ ಮಾಡಲು ಕ್ರಮವಹಿಸಲಾಗಿರುವುದರಿಂದ ಮೈಸೂರು ಪೇಪರ್ ಮಿಲ್ಸ್ ಲಿಮಿಟೆಡ್‌ನ ಉದ್ಯೋಗಿಗಳನ್ನು ನಿಯೋಜನೆ ಮೇರೆಗೆ ನೇಮಕಾತಿ ಮಾಡುವುದು ಅವಶ್ಯವಿಲ್ಲವೆಂದು ತೀರ್ಮಾನಿಸಲಾಯಿತು.

<u>ವಿಷಯ ಸಂಖ್ಯೆ-20:</u> ಶ್ರೀ.ಎಸ್.ಡಿ.ಸೋಮಪ್ಪ. ನಿವೃತ್ತ ಜಿಲ್ಲಾ ವ್ಯವಸ್ಥಾಪಕರು, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, ಇವರನ್ನು ಸಂಚಿತ ವೇತನದ ಆಧಾರದ ನೇಮಕಾತಿಯನ್ನು ವಿಸ್ತರಿಸಿರುವುದನ್ನು ನಿರ್ದೇಶಕ ಮಂಡಳಿಯ ಘಟನೋತ್ತರ ಅನುಮೋದನೆ ಪಡೆಯುವ ಬಗ್ಗೆ.

<u>ನಿರ್ಣಯ:</u> ಶ್ರೀ.ಎಸ್.ಡಿ.ಸೋಮಪ್ಪ. ಅಭಿವೃದ್ಧಿ ಅಧಿಕಾರಿ, ಇವರನ್ನು ದಕ್ಷಿಣ ಕನ್ನಡ ಜಿಲ್ಲಾ ಕಛೇರಿಯಲ್ಲಿ ಅಭಿವೃದ್ಧಿ ಅಧಿಕಾರಿಯ ಹುದ್ದೆಯಲ್ಲಿ ಸಂಚಿತ ಸಂಭಾವನೆಯ ಆಧಾರದಲ್ಲಿ ಈ ಹುದ್ದೆಗೆ ನೇಮಕಾತಿ ಮಾಡುವವರೆಗೆ ಮುಂದುವರಿಸಲು ಘಟನೋತ್ತರ ಅನುಮೋದನೆ ನೀಡಲು ತೀರ್ಮಾನಿಸಲಾಯಿತು.

<u>ವಿಷಯ ಸಂಖ್ಯೆ-21:</u> ಹಾಪ್‌ಕಾಮ್ಸ್ ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರನ್ನು ನಿಗಮಕ್ಕೆ ನಿಯೋಜನೆ ಮೇಲೆ ಪಡೆಯುವ ಕುರಿತು.

<u>ನಿರ್ಣಯ:</u> ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಲ್ಲಿ ಖಾಲಿ ಇರುವ 201 ಗ್ರೂಪ್ 'ಸಿ' ಹುದ್ದೆಗಳನ್ನು ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಭರ್ತಿ ಮಾಡಲು ಕ್ರಮವಹಿಸಲಾಗಿರುವುದರಿಂದ ಹಾಪ್‌ಕಾಮ್ಸ್ ಸಂಸ್ಥೆಯ ಉದ್ಯೋಗಿಗಳನ್ನು ನಿಯೋಜನೆ ಮೇರೆಗೆ ನೇಮಕಾತಿ ಮಾಡುವುದು ಅವಶ್ಯವಿಲ್ಲವೆಂದು ತೀರ್ಮಾನಿಸಲಾಯಿತು.

<u>ವಿಷಯ ಸಂಖ್ಯೆ-22:</u> ಕನ್ನಡ ಮಾಸ ಪತ್ರಿಕೆ, ಸ್ಮರಣ ಸಂಚಿಕೆ, ಡೈರಿ, ದಿನಪತ್ರಿಕೆ, ವಿಶೇಷಾಂಕಗಳು, ಪಾಕ್ಷಿಕ ಪತ್ರಿಕೆ ಮುಂತಾದವುಗಳಿಗೆ ನಿಗಮದ ಜಾಹಿರಾತು ನೀಡುವ ಕುರಿತು.

<u>ನಿರ್ಣಯ:</u> ಸರ್ಕಾರದ ಆದೇಶದನ್ವಯ ಎಲ್ಲಾ ಜಾಹೀರಾತುಗಳನ್ನು ಕಡ್ಡಾಯವಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಮೂಲಕ ಬಿಡುಗಡೆ ಮಾಡಬೇಕಾಗಿರುತ್ತದೆ. ಕನ್ನಡ ಮಾಸ ಪತ್ರಿಕೆ, ಸ್ಮರಣ ಸಂಚಿಕೆ, ಡೈರಿ, ದಿನಪತ್ರಿಕೆ, ವಿಶೇಷಾಂಕಗಳು, ಪಾಕ್ಷಿಕ ಪತ್ರಿಕೆ ಮುಂತಾದವುಗಳಿಗೆ

ಜಾಹೀರಾತು ನೀಡುವ ಅವಶ್ಯಕತೆ ಸದ್ಯಕ್ಕೆ ಇರುವುದಿಲ್ಲವೆಂದು ಗಮನಿಸಲಾಯಿತು. ಆದಾಗ್ಯೂ ಅನಿವಾರ್ಯತೆ, ಸಾಂದರ್ಭಿಕ ಅವಶ್ಯಕತೆಗನುಗುಣವಾಗಿ ಅಧ್ಯಕ್ಷರ ಅನುಮತಿ ಮೇರೆಗೆ ಜಾಹೀರಾತು ನೀಡಲು ತೀರ್ಮಾನಿಸಲಾಯಿತು.

<u>ವಿಷಯ ಸಂಖ್ಯೆ-3(1):</u> ಹಿಂದುಳಿದ ವರ್ಗಗಳ ಜನರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ನೀಡಲಾದ ಸಾಲದ ವಸೂಲಾತಿ ಪ್ರಗತಿ.

<u>ನಿರ್ಣಯ</u>: ಸರ್ಕಾರದ ಆದೇಶ ಸಂಖ್ಯೆ: ಬಿಸಿಡಬ್ಲ್ಯೂ 374 ಬಿಎಂಎಸ್ 2013, ದಿನಾಂಕ:15/05/2013ರ ಆದೇಶದಲ್ಲಿ ನಿಗಮದ ಪ್ರಾರಂಭದಿಂದ ದಿನಾಂಕ:13/05/2013ರವರೆಗೆ 4,98,234 ಫಲಾನುಭವಿಗಳಿಂದ ವಸೂಲಾತಿಗೆ ಬಾಕಿ ಇರುವ ಒಟ್ಟು ರೂ.514.26 ಕೋಟಿಗಳನ್ನು ಮನ್ನಾ ಮಾಡಿ ಆದೇಶಿಸಲಾಗಿದೆ.

2013-14ನೇ ಸಾಲಿನಿಂದ 2018-19ನೇ ಸಾಲಿನವರೆಗೆ ಒಟ್ಟು 2,17,261 ಹಿಂದುಳಿದ ವರ್ಗಗಳ ಜನರಿಗೆ ರೂ.798.38 ಕೋಟಿಗಳ ಸಾಲ ಒದಗಿಸಲಾಗಿದೆ. ಈ ಮೊತ್ತದಲ್ಲಿ ನವೆಂಬರ್-2019ರ ಅಂತ್ಯಕ್ಕೆ ಸಾಲ ವಸೂಲಾತಿ ಬೇಡಿಕೆ(Demand) ರೂ.402.42 ಕೋಟಿಗಳಿದ್ದು, ಈವರೆಗೆ ರೂ.85.05 ಕೋಟಿ ವಸೂಲಾತಿ (Collection) ಆಗಿರುತ್ತದೆ. ಇದು ಶೇ.21.13ರಷ್ಟು ವಸೂಲಾತಿ ಪ್ರಗತಿಯಾಗಿರುತ್ತದೆ.

ಸಾಲ ವಸೂಲಾತಿ ಪ್ರಮಾಣವನ್ನು ತ್ವರಿತಗೊಳಿಸಲು ನಿಗಮವು ಈ ಕೆಳಕಂಡಂತೆ ಕ್ರಮವಹಿಸಿದೆ.

1. ಫಲಾನುಭವಿಗೆ ಸಾಲ ಮಂಜೂರಾತಿ ಆದೇಶದೊಂದಿಗೆ ಪಾಸ್ ಪುಸ್ತಕ ನೀಡಿ, ಇದರಲ್ಲಿ ಮರುಪಾವತಿ ಕಂತುಗಳು, ಪ್ರತಿ ಕಂತಿನ ಅಸಲು ಮತ್ತು ಬಡ್ಡಿ ಮೊತ್ತ, ಪಾವತಿಸಬೇಕಾದ ಮೊದಲನೇ ಕಂತು ಹಾಗೂ ಕೊನೆಯ ಕಂತುಗಳನ್ನು ದಾಖಲಿಸಲಾಗಿರುತ್ತದೆ.
2. ಫಲಾನುಭವಿಗಳಿಗೆ ಸಾಲ ಮರುಪಾವತಿಸಲು ತಿಳುವಳಿಕೆ ಪತ್ರ ನೀಡಲಾಗುತ್ತಿದೆ.

3. ಫಲಾನುಭವಿಗಳಿಗೆ ಮರುಪಾವತಿಗೆ ಎಸ್.ಎಂ.ಎಸ್. ಮೂಲಕ ತಿಳಿಸಲಾಗುತ್ತಿದೆ.
4. ಫಲಾನುಭವಿಗಳನ್ನು ನಿಗಮದ ಜಿಲ್ಲಾ ವ್ಯವಸ್ಥಾಪಕರು ಹಾಗೂ ಇತರೆ ಅಧಿಕಾರಿಗಳು ಖುದ್ದಾಗಿ ಭೇಟಿ ಮಾಡಿ ಸಾಲ ಮರುಪಾವತಿ ಮಾಡುವಂತೆ ಒತ್ತಾಯಿಸಿಲಾಗುತ್ತಿದೆ.
5. ಸಾಲ ವಸೂಲಾತಿಯನ್ನು ಚುರುಕುಗೊಳಿಸಲು ನೋಡಲ್ ಅಧಿಕಾರಿಯನ್ನು ನೇಮಿಸಲಾಗಿದೆ.
6. ಜಿಲ್ಲಾ ಮಟ್ಟದಲ್ಲಿ ಸುಸ್ತಿದಾರರಿಗೆ ಸಾಲ ಮರುಪಾವತಿಸುವಂತೆ ಜಿಲ್ಲಾ ವ್ಯವಸ್ಥಾಪಕರುಗಳು ತಗಾದೆ ನೋಟೀಸ್ ನೀಡುತ್ತಿದ್ದು, ನಿಗಮದ ಕೇಂದ್ರ ಕಛೇರಿಯಿಂದಲೂ ಸಹ ಪ್ರಿ-ಪ್ರಿಂಟೆಡ್ ನೋಟೀಸುಗಳನ್ನು ಕಂಪ್ಯೂಟರ್‌ನಲ್ಲಿ ಜನರೇಟ್ ಮಾಡಿ ಎಲ್ಲಾ ಸುಸ್ತಿದಾರರಿಗೆ ನೋಟೀಸ್ ನೀಡಲು ಕ್ರಮವಹಿಸಲಾಗಿದೆ.
7. ಪ್ರತಿ ತ್ರೈಮಾಸಿಕದಲ್ಲಿ ಒಂದು ಭಾರಿ ಮರುಪಾವತಿ ಆಂದೋಲನಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.
8. ಸುಸ್ತಿದಾರರಿಗೆ ಲೀಗಲ್ ನೋಟೀಸ್ ಜಾರಿ ಮಾಡಲಾಗುತ್ತಿದೆ.
9. ಫಲಾನುಭವಿಗಳಿಗೆ ಸಾಲ ನೀಡುವ ಪೂರ್ವದಲ್ಲಿ ಇಡಿಪಿ ತರಭೇತಿ ನೀಡಿ ಸಾಲ ಸದುಪಯೋಗ ಪಡಿಸಿಕೊಳ್ಳಲು ಸಾಲದ ಕಂತುಗಳನ್ನು ಪಾವತಿಸುವ ಬಗ್ಗೆ ತಿಳುವಳಿಕೆ ನೀಡಲಾಗಿದೆ.
10. ಪ್ರತಿದಿನ ಕೇಂದ್ರ ಕಛೇರಿಯಿಂದ ಜಿಲ್ಲಾವಾರು ಮರುಪಾವತಿ ಮೊತ್ತದ ಬಗ್ಗೆ ಇ-ಮೇಲ್ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ.
11. ಪ್ರತಿ ತಿಂಗಳು ಮರುಪಾವತಿ ಗುರಿ ನಿಗಧಿಪಡಿಸಿ ಮಾಸಿಕ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮರುಪಾವತಿ ಪ್ರಗತಿಯ ಬಗ್ಗೆ ಪರಿಶೀಲಿಸಲಾಗುತ್ತಿದೆ. ಬಾಕಿ ಇರುವ ಸಾಲ ವಸೂಲಾತಿಗೆ ಆದ್ಯತೆ ನೀಡಿ ವಸೂಲಾತಿಯನ್ನು ಹೆಚ್ಚಿಸಲಾಗುವುದು.
12. ಜಿಲ್ಲಾ ಕಛೇರಿಯಲ್ಲಿರುವ ಹೊರಸಂಪನ್ಮೂಲ ಸಿಬ್ಬಂದಿಗಳಿಗೂ ಸಹ ತಾಲ್ಲೂಕುಗಳನ್ನು ಹಂಚಿಕೆ ಮಾಡಿ ಸಾಲ ವಸೂಲಾತಿ ಮಾಡುವಂತೆ ಸೂಚಿಸಿದ್ದು, ಈಗಾಗಲೇ ಈ ಬಗ್ಗೆ ಸಿಬ್ಬಂದಿಯು ಕಾರ್ಯಪ್ರವೃತ್ತರಾಗಿರುತ್ತಾರೆ.

ಮೇಲ್ಕಂಡಂತೆ, ಸಾಲ ವಸೂಲಾತಿಗೆ ಕೈಗೊಂಡ ಕ್ರಮಗಳನ್ನು ಗಮನಿಸಲಾಯಿತು. ಶೇ.20ಕ್ಕಿಂತ ಕಡಿಮೆ ಸಾಲ ವಸೂಲಾತಿ ಪ್ರಗತಿ ಕಡಿಮೆ ಇರುವ ಜಿಲ್ಲೆಗಳ ಜಿಲ್ಲಾ ವ್ಯವಸ್ಥಾಪಕರ/ಸಹಾಯಕ ಅಭಿವೃದ್ಧಿ ಅಧಿಕಾರಿ ಇವರುಗಳಿಗೆ ಎಚ್ಚರಿಕೆ ನೋಟೀಸ್ ನೀಡಿ, ನಿಗಮದ ಸೇವಾನಿಯಮಾವಳಿ ಅನ್ವಯ ಸಾಲ ವಸೂಲಾತಿ ನಿರೀಕ್ಷೆಯಂತೆ ಸಾಧಿಸಲು ವಿಫಲರಾದ ಬಗ್ಗೆ ಶಿಸ್ತುಕ್ರಮ ಕೈಗೊಳ್ಳಲು ತೀರ್ಮಾನಿಸಲಾಯಿತು.

ಸ್ಥಳ: ಬೆಂಗಳೂರು
ದಿನಾಂಕ: 31-12-2019

(ಮೊಹಮದ್ ಮೊಹಸಿನ್ ಐ.ಎ.ಎಸ್)
ಅಧ್ಯಕ್ಷರು